# ಬಿಸಿನೀರು ಮುದ್ದಪ್ಪ ಸರ್ಕಾರಿ ಪ್ರೌಢಶಾಲೆ
# ಚಳ್ಳಕೆರೆ , ಚಿತ್ರದುರ್ಗ ಜಿಲ್ಲೆ

## ತೃತೀಯ ಭಾಷೆ ಹಿಂದಿ

## -: ಸಹಕಾರ ಮತ್ತು ಸಹಭಾಗಿತ್ವ :-

## ಮುಖ್ಯ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗ

## ಎಸ್.ಎಸ್.ಎಲ್.ಸಿ. ತೃತಿಯ ಭಾಷೆ ಹಿಂದಿ ವಿಷಯದ ಫಲಿತಾಂಶ ಉತ್ತಮಪಡಿಸಲು ಕ್ರಿಯಾಯೋಜನೆ 2024-2025

| ಪರೀಕ್ಷಾ ಪ್ರಾರಂಭ | ಮಾರ್ಚ/ಏಪ್ರಿಲ್ 2025 |
|---|---|
| ಉದ್ದೇಶ | ತೃತಿಯ ಭಾಷೆ ಹಿಂದಿ ವಿಷಯದಲ್ಲಿ 100ಕ್ಕೆ 100 ರಷ್ಟು ಫಲಿತಾಂಶವನ್ನು ಪಡೆಯುವುದು ಹಾಗೂ ಗುಣಮಟ್ಟದ ಶಿಕ್ಷಣದ ನಿರ್ವಹಣೆ ಮಾಡುವುದು |
| ನಿಗದಿಪಡಿಸಿದ ಅಥವಾ ನಿರೀಕ್ಷಿಸಿರುವ ಗುರಿ | ಗುಣಾತ್ಮಕ ಕಲಿಕೆಯೊಂದಿಗೆ 100% ಫಲಿತಾಂಶ |
| ಹಿಂದಿ ವಿಷಯ ಶಿಕ್ಷಕರ ಹೆಸರು | ಬಿ ಎಸ್ ಸುರೇಶ್ ನಾಯ್ಕ್ |
| ಸಹಭಾಗಿತ್ವ | ಶಾಲಾ ಮುಖ್ಯಸ್ಥರು ಮತ್ತು ಶಿಕ್ಷಕ ವೃಂದ, ವಿದ್ಯಾರ್ಥಿಗಳು, ಪೋಷಕರು ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ |

# ಬಿಸಿನೀರು ಮುದ್ದಪ್ಪ ಸರ್ಕಾರಿ ಪ್ರೌಢಶಾಲೆ , ಚಳ್ಳಕೆರೆ ,ಚಿತ್ರದುರ್ಗ ಜಿಲ್ಲೆ.

**ವಿಷಯ : ತೃತಿಯ ಭಾಷೆ ಹಿಂದಿ**

## 2024–25 ನೇ ಸಾಲಿನ ಎಸ್ ಎಸ್ ಎಲ್ ಸಿ ಫಲಿತಾಂಶ ಉತ್ತಮಪಡಿಸಲು ಹಾಕಿಕೊಂಡ ಯೋಜಿತ ಕಾರ್ಯಕ್ರಮಗಳು:

| ಕ್ರ.ಸಂ | ಚಟುವಟಿಕೆಯ ಹೆಸರು | ಅನುಷ್ಠಾನ ಗೊಳಿಸುವವರು | ನಿಗದಿಪಡಿಸಿದ ಅವಧಿ/ತಿಂಗಳು | ಚಟುವಟಿಕೆಯ ವಿವರ |
|---|---|---|---|---|
| 1 | 10ನೇ ತರಗತಿ ಮಕ್ಕಳಿಗೆ ಎಸ್.ಎಸ್.ಎಲ್.ಸಿ ಯ ಮಹತ್ವ ತಿಳಿಸುವುದು | ಮುಖ್ಯಶಿಕ್ಷಕರು / ಸಹಶಿಕ್ಷಕರು | ಜೂನ್ | ಪ್ರಸ್ತುತ ವರ್ಷದ ಪ್ರಾರಂಭದಲ್ಲೆ 10ನೇ ತರಗತಿ ಮಕ್ಕಳಿಗೆ ಎಸ್.ಎಸ್.ಎಲ್.ಸಿ.ಯು ಮಹತ್ವದ ಹಂತ, ಮುಂದಿನ ಉಜ್ವಲ ಜೀವನದ ಪ್ರಾರಂಭದ ಹಂತ, ಇದರಲ್ಲಿ ಯಾವುದೇ ರೀತಿಯ ಆಲಸ್ಯ, ಅಸಡ್ಡೆ ಸಲ್ಲದು ಎನ್ನುವ ವಿಷಯವನ್ನು ಅವರಿಗೆ ಎಲ್ಲಾ ಶಿಕ್ಷಕರು ಮನದಟ್ಟು ಮಾಡಿಕೊಡುವುದು. |
| 2 | ಶಿಕ್ಷಕರ ಸಭೆ | ಮುಖ್ಯಶಿಕ್ಷಕರು/ ಸಹಶಿಕ್ಷಕರು/ ಆಡಳಿತ ಮಂಡಳಿ | ಪ್ರತಿ ತಿಂಗಳ ಮೊದಲನೆ ವಾರ | ವಿದ್ಯಾರ್ಥಿಗಳ ಸಮಸ್ಯೆಗಳನ್ನು ಅರಿತು ಸಮಸ್ಯೆಗೆ ಪರಿಹಾರ ನಿಡುವುದು ಮತ್ತು ಶಾಲೆಯನ್ನು ಅಭಿವೃದ್ಧಿಪಡಿಸುವುದು. |
| 3 | ಪೋಷಕರ ಸಭೆ | ಮುಖ್ಯಶಿಕ್ಷಕರು/ ಸಹಶಿಕ್ಷಕರು/ ಆಡಳಿತ ಮಂಡಳಿ | ಪ್ರತಿ ಎರಡು ತಿಂಗಳಿಗೊಮ್ಮೆ | ಮಕ್ಕಳ ಕಲಿಕಾ ಪ್ರಗತಿಯಲ್ಲಿ ಪೋಷಕರ ಪಾತ್ರವು ನಿರ್ಣಾಯಕವಾಗಿರುತ್ತದೆ, ಆದ್ದರಿಂದ ಮಕ್ಕಳ ಅಭಿವೃದ್ಧಿಯನ್ನು ಮತ್ತು ಹಾಜರಾತಿಯನ್ನು ತಿಳಿಸುವುದು, ಇದರಿಂದ ಶಾಲೆಗಳ ಜೊತೆ ಪೋಷಕರು ನಿಕಟ ಬಾಂಧವ್ಯ ಹೊಂದಬಹುದಾಗಿದೆ. |
| 4 | ಯೋಗ ಮತ್ತು ಧ್ಯಾನ | ದೈಹಿಕ ಶಿಕ್ಷಕರು ಮತ್ತು ವಿಷಯ ಶಿಕ್ಷಕರು. | ಪ್ರತಿ ಶನಿವಾರ ಮುಂಜಾನೆ ಅವದಿಯಲ್ಲಿ | ತರಗತಿ/ಶಾಲಾ ಆವರಣದಲ್ಲಿ ಯೋಗ/ಧ್ಯಾನ ನಡೆಸುವುದು. ಪ್ರತಿ ಶನಿವಾರ ವಿದ್ಯಾರ್ಥಿಗಳು ವೈವಿಧ್ಯಮಯ ಚಟುವಟಿಕೆಗಳಲ್ಲಿ ಪಾಲ್ಗೊಳುವರು, ಇದರಿಂದ ವಿದ್ಯಾರ್ಥಿಗಳ ಮನಸ್ಸನ್ನು ಕೇಂದ್ರಿಕರಿಸುವರು. |
| 5 | ಘಟಕ ಮತ್ತು ಕಿರು ಪರೀಕ್ಷೆಗಳನ್ನು ನಡೆಸುವುದು | ವಿಷಯವಾರು ಶಿಕ್ಷಕರು | ಜೂನ್ ನಿಂದ ಪರೀಕ್ಷೆವರೆಗೆ | ಪ್ರತಿ ಘಟಕ ಮುಗಿದ ನಂತರ ಆ ಘಟಕಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ತಯಾರಿಸಿ ಘಟಕ ಪರೀಕ್ಷೆಗಳನ್ನು ನಡೆಸುವುದು. ನಿಯಮಾನುಸಾರ ಸಾಧನಾ ಪರೀಕ್ಷೆಗಳನ್ನು ನಡೆಸುವುದು. |
| 6 | ನಿಧಾನಗತಿ ಕಲಿಕೆಯ ಮಕ್ಕಳನ್ನು ಗುರುತಿಸುವುದು | ವಿಷಯವಾರು ಶಿಕ್ಷಕರು | ಜೂನ್/ ಜುಲೈ | ಶಾಲಾ ಪ್ರಾರಂಭದಲ್ಲಿಯೇ ಸೇತುಬಂಧ ಕಾರ್ಯಕ್ರಮ ನಡೆಸಿ ವಿಶ್ಲೇಷಣೆ ಮಾಡಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸುವುದು |

| ಕ್ರ ಸಂ | ಚಟುವಟಿಕೆಯ ಹೆಸರು | ಅನುಷ್ಠಾನ ಗೊಳಿಸುವವರು | ನಿಗದಿಪಡಿಸಿದ ಅವಧಿ/ತಿಂಗಳು | ಚಟುವಟಿಕೆಯ ವಿವರ |
|---|---|---|---|---|
| 7 | ಸಾಮರ್ಥ್ಯಾಧಾರಿತ ಗುಂಪುಗಳ ರಚನೆ: | ಮುಖ್ಯಶಿಕ್ಷಕರು/ ಸಹ ಶಿಕ್ಷಕರು | ಜುಲೈನಿಂದ ಪರೀಕ್ಷೆವರೆಗೆ | ಮಗುವಿನ ಕಲಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿ ತರಗತಿಯಲ್ಲಿ ಉತ್ತಮ ಕಲಿಕೆಯ ಮಕ್ಕಳು, ಮಧ್ಯಮ ಕಲಿಕೆಯ ಮಕ್ಕಳು ಹಾಗೂ ನಿಧಾನಗತಿ ಕಲಿಕೆಯ ಮಕ್ಕಳು ಎಂದು ಗುಂಪುಗಳಾಗಿ ವಿಂಗಡಿಸುವುದು. ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಚಟುವಟಿಕೆ ಹಾಗೂ ಪ್ರಶ್ನೆಗಳನ್ನು ನೀಡಿ ಅಭ್ಯಾಸ ಮಾಡಿಸುವುದು. |
| 8 | ವಿದ್ಯಾರ್ಥಿಗಳ ದಿನವಹಿ ಅಭ್ಯಾಸ ವೇಳಾಪಟ್ಟಿ | ಮುಖ್ಯಶಿಕ್ಷಕರು/ ಸಹಶಿಕ್ಷಕರು | ಜುಲೈನಿಂದ ಪರೀಕ್ಷೆವರೆಗೆ | ಪ್ರತಿಯೊಂದು ಮಗುವಿಗೂ ವಾರದ ಎಲ್ಲಾ ದಿನಗಳಂದು ಎಲ್ಲಾ ವಿಷಯಗಳನ್ನು ಪ್ರತಿದಿನ ಲಭ್ಯವಿರುವ ಅವಧಿಯಲ್ಲಿ ಅವರದೇ ಆದ್ಯತೆಯಂತೆ ಹಂಚಿಕೊಂಡು ಸಮಯದ ಸದುಪಯೋಗ ಪಡಿಸಿಕೊಳ್ಳಲು ಮುದ್ರಿತ ವೇಳಾಪಟ್ಟಿಯನ್ನು ನೀಡಿ ಆದ್ಯತೆಯ ಮೇರೆಗೆ ಸಮಯ ಹಂಚಿಕೆ ಮಾಡಿ ಅಧ್ಯಯನ ಮಾಡಲು ತಿಳುವಳಿಕೆ ನೀಡಿ ಗಮನಿಸುವುದು. |
| 9 | ದತ್ತು ಯೋಜನೆ | ಮುಖ್ಯಶಿಕ್ಷಕರು/ ಸಹಶಿಕ್ಷಕರು | ಜುಲೈ 1 ನೇ ವಾರದಿಂದ | ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಶಿಕ್ಷಕರಿಗೆ ದತ್ತು ನೀಡುವುದು. ಶಿಕ್ಷಕರು ದತ್ತು ಪಡೆದ ಮಕ್ಕಳ ದೂರವಾಣಿ ಸಂಖ್ಯೆಯೊಂದಿಗೆ ಅವರ ಪೋಷಕರೊಡನೆ ನಿರಂತರ ಸಂಪರ್ಕದಲ್ಲಿರುವುದು, ಮಕ್ಕಳ ಕಲಿಕಾ ಸಾಧನೆ ಹಾಜರಾತಿ ಬಗ್ಗೆ ಪೋಷಕರಿಗೆ ಮಾಹಿತಿ ನೀಡುವುದು |
| 10 | ವಿಶೇಷ ತರಗತಿ | ವಿಷಯವಾರು ಶಿಕ್ಷಕರು / ಮುಖ್ಯಶಿಕ್ಷಕರು | ಪ್ರತಿ ದಿನ 9 ಗಂಟೆಯಿಂದ 10 ವರೆಗೆ | ವಾರದಲ್ಲಿ ಒಂದು ದಿನ ಬೆಳಿಗ್ಗೆ 9.00 ಗಂಟೆಯಿಂದ 9.45 ಗಂಟೆಯವರೆಗೆ ವಿಶೇಷ ತರಗತಿ ತೆಗೆದುಕೊಂಡು ಕ್ಲಿಷ್ಟಕರವಾದ ಅಧ್ಯಾಯಗಳನ್ನು ಮರುಬೋಧನೆ ಮಾಡುವ ಹಾಗೂ ಸಂಜೆ ಗುಂಪು ಅಧ್ಯಯನದಲ್ಲಿ ಪುನರಾವರ್ತನೆ ಮತ್ತು ಓದಿಸುವ ಕಾರ್ಯ ಹಮ್ಮಿಕೊಳ್ಳುವುದು. |
| 11 | ಗುಂಪು ಅಧ್ಯಯನ | ಮುಖ್ಯಶಿಕ್ಷಕರು/ ಸಹ ಶಿಕ್ಷಕರು | ಸಂಜೆ 4 ರಿಂದ 5 ವರೆಗೆ | ಮಕ್ಕಳನ್ನು ಗುಂಪು ಮಾಡಿ ದತ್ತು ಯೋಜನೆಯಂತೆ ನಮಗೆ ಉಸ್ತುವಾರಿ ವಹಿಸಿದ ಪ್ರತಿದಿನ ನಮ್ಮ ಗುಂಪಿನ ಮಕ್ಕಳ ಎಲ್ಲಾ ವಿಷಯಗಳಲ್ಲಿನ ಪ್ರಗತಿಯನ್ನು ಅವರು ನಿರ್ವಹಿಸುತ್ತಿರುವ ಗೃಹಪಾಠ, ನೋಟ್ಸ್ ಹಾಗೂ ಹಾಜರಾತಿ ಬಗ್ಗೆ ಪರಿಶೀಲಿಸಿ ವಿದ್ಯಾರ್ಥಿಗಳು ಅಭ್ಯಸಿಸಲು ನೆರವಾಗುವುದು. |

| ಕ್ರ ಸಂ | ಚಟುವಟಿಕೆಯ ಹೆಸರು | ಅನುಷ್ಠಾನ ಗೊಳಿಸುವವರು | ನಿಗದಿಪಡಿಸಿದ ಅವಧಿ/ತಿಂಗಳು | ಚಟುವಟಿಕೆಯ ವಿವರ |
|---|---|---|---|---|
| 12 | ದೂರವಾಣಿ ಕಾರ್ಯಕ್ರಮ | ವಿಷಯವಾರು ಶಿಕ್ಷಕರು / ಮುಖ್ಯಶಿಕ್ಷಕರು | ಅಗತ್ಯವಿರುವ ದಿನಗಳಲ್ಲಿ ಗುಂಪು ಅಧ್ಯಾಯನ ಸಮಯದಲ್ಲಿ | 10ನೇ ತರಗತಿಯ ಎಲ್ಲಾ ಮಕ್ಕಳ ಪೋಷಕರ ದೂರವಾಣಿ ಸಂಖ್ಯೆಗಳನ್ನು ಹಿಂದಿನ ಸಂಗ್ರಹಿಸಿ ಪ್ರತಿದಿನ ರಾತ್ರಿ ಹಲವು ಮಕ್ಕಳ ಪೋಷಕರಿಗೆ ರಾತ್ರಿ 9.00 ಗಂಟೆಯ ನಂತರ ಕರೆಮಾಡಿ ಅವರ ಮಗ/ಮಗಳು ಅಧ್ಯಯನದಲ್ಲಿ ತೊಡಗಿದ್ದಾರೆಯೇ ಹೇಗೆ? ಎಂಬುದರ ಬಗ್ಗೆ ಪರಿಶೀಲಿಸುವುದು. |
| 13 | ರಸ ಪ್ರಶ್ನೆ ಕಾರ್ಯಕ್ರಮ | ವಿಷಯವಾರು ಶಿಕ್ಷಕರು / ಮುಖ್ಯಶಿಕ್ಷಕರು | ಪ್ರತಿ ಎರಡು ವಾರಕ್ಕೊಮ್ಮೆ | ಜೂನ್ ಪ್ರಾರಂಭದಿಂದ ಎಸ್ ಎಸ್ ಎಲ್ ಸಿ ತರಗತಿಯ ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ವಿಂಗಡಿಸಿ ಪ್ರತಿ ತಿಂಗಳು ಬಹು ಆಯ್ಕೆ ಮತ್ತು ಒಂದು ವಾಕ್ಯದ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ರಸಪ್ರಶ್ನೆ ಕಾರ್ಯಕ್ರಮ ನಡೆಸಿ ಅಂಕ ನೀಡಿ ಉತ್ತಮ ಅಂಕ ಪಡೆದ ಗುಂಪಿನ ಬಗ್ಗೆ ಪ್ರಶಂಸೆ ನೀಡುವುದರ ಮೂಲಕ ಅಭ್ಯಾಸದಲ್ಲಿ ಆಸಕ್ತಿ ಮೂಡಿಸಲಾಗುವುದು. ಮತ್ತು ಈ ರಸಪ್ರಶ್ನೆ ಕಾರ್ಯಕ್ರಮವನ್ನು ಡಿಸೆಂಬರ್ ತಿಂಗಳ ನಂತರ ತಿಂಗಳಿಗೆ ಎರಡು ಬಾರಿ ನಡೆಸಲು ಕ್ರಮ ಕೈಗೊಳ್ಳಲಾಗುವುದು. |
| 14 | ಮನೆ ಮನೆ ಭೇಟಿ | ಮುಖ್ಯಶಿಕ್ಷಕರು/ ಸಹ ಶಿಕ್ಷಕರು/ ವಿದ್ಯಾರ್ಥಿಗಳು | ಜನವರಿ— ಎಪ್ರಿಲ್ | ಪೋಷಕರಿಗೆ ತಮ್ಮ ಮಕ್ಕಳ ಪ್ರಗತಿಯನ್ನು ಖಚಿತ ಪಡಿಸುವುದು. ಮಕ್ಕಳ ಕಲಿಕೆಯ ಕಡೆಗೆ ಪೋಷಕರನ್ನುಪೂರ್ಣವಾಗಿ ತೊಡಗಿಸಿಕೊಳ್ಳುವುದು. |
| 15 | ಶಿಕ್ಷಕರಿಂದ ಆಪ್ತ ಸಮಾಲೋಚನ ಸಭೆ | ಮುಖ್ಯಶಿಕ್ಷಕರು/ ಸಹ ಶಿಕ್ಷಕರು | ಜನವರಿ ಮೊದಲ ವಾರ | ಹಿಂದುಳಿದ ವಿದ್ಯಾರ್ಥಿಗಳು/ ಪೋಷಕರು |
| 16 | ಪೋಷಕರೊಂದಿಗೆ ಸಮಾಲೋಚನೆ | ಮುಖ್ಯಶಿಕ್ಷಕರು/ ಸಹಶಿಕ್ಷಕರು/ ಆಡಳಿತ ಮಂಡಳಿ | ಜನವರಿ ಮೊದಲ ವಾರ | ಪ್ರತಿ ತಿಂಗಳು ವಿಶೇಷವಾಗಿ 10ನೇ ತರಗತಿಯ ನಿಧಾನಗತಿ ಕಲಿಕೆಯ ಮಕ್ಕಳ ಪೋಷಕರನ್ನು ಕರೆಸಿ ಸಭೆ ನಡೆಸಿ ಯಾವ ವಿಷಯದಲ್ಲಿ ತಮ್ಮ ಮಗು ಹಿಂದೆ ಇದೆ. ಇನ್ನೂ ಮುಂದೆ ಹೇಗೆ ಓದಬೇಕು, ಮಕ್ಕಳ ಅಭ್ಯಾಸದಲ್ಲಿ ಪೋಷಕರ ಪಾತ್ರ ಶಿಕ್ಷಕರಷ್ಟೇ ಮುಖ್ಯ ಎಂಬುದನ್ನು ಮನವರಿಕೆ ಮಾಡಿಕೊಡುವುದು. ಮಕ್ಕಳ ಕಲಿಕೆಗೆ ಮನೆಯಲ್ಲಿ ಎಂತಹ ವಾತಾವರಣ ಇರಬೇಕು? ಎಂಬ ವಿಷಯಗಳನ್ನು ಚರ್ಚಿಸಿ ಅಭಿಪ್ರಾಯ ಹಂಚಿಕೊಳ್ಳುವುದು. |
| 17 | ಪ್ರಶ್ನೆ ಪತ್ರಿಕೆ ವಿನ್ಯಾಸ ಪರಿಚಯ: | ವಿಷಯವಾರು ಶಿಕ್ಷಕರು | ಜನವರಿ ಮೊದಲ ವಾರ | 2023–24 ರ ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆಗೆ ಸಂಬಂಧಿಸಿದಂತೆ ಮಾದರಿ ಪ್ರಶ್ನೆಪತ್ರಿಕೆಯ ಆಧಾರದ ಮೇಲೆ ಯಾವ ಯಾವ ರೀತಿಯ ಪ್ರಶ್ನೆಗಳು ಬರಬಹುದು ಎಂಬ ವಿಷಯವನ್ನು ಮಕ್ಕಳಿಗೆ ತಿಳಿಸಿ ಅದರಂತೆ ಅಭ್ಯಸಿಸಲು ತಿಳಿಸುವುದು. |

| ಕ್ರ ಸಂ | ಚಟುವಟಿಕೆಯ ಹೆಸರು | ಅನುಷ್ಠಾನ ಗೊಳಿಸುವವರು | ನಿಗದಿಪಡಿಸಿದ ಅವಧಿ/ತಿಂಗಳು | ಚಟುವಟಿಕೆಯ ವಿವರ |
|---|---|---|---|---|
| 18 | ಸ್ಕೋರಿಂಗ್ ಪ್ಯಾಕೇಜ್: | ವಿಷಯವಾರು ಶಿಕ್ಷಕರು | ಜುಲೈ | ಎಸ್.ಎಸ್.ಎಲ್.ಸಿ ಯ ಪ್ರತಿ ಮಗುವಿಗೆ ಅತಿಹೆಚ್ಚು ಅಂಕಗಳನ್ನು ಗಳಿಸಲು ಸಹಾಯಕವಾಗುವಂತಹ ಸ್ಕೋರಿಂಗ್ ಪ್ಯಾಕೇಜನ್ನು ಸಿದ್ಧಪಡಿಸಿ ನೀಡುವುದು. ಅಲ್ಲದೆ ಅದಕ್ಕೆ ಅನುಗುಣವಾಗಿ ಮಕ್ಕಳನ್ನು ಹೆಚ್ಚು ಅಧ್ಯಯನಶೀಲರಾಗುವಂತೆ ಮಾಡುವುದು. |
| 19 | ಪಾಸಿಂಗ್ ಪ್ಯಾಕೇಜ್ | ವಿಷಯವಾರು ಶಿಕ್ಷಕರಿಂದ | ನವಂಬರ್ ನಂತರ | ಪಠ್ಯಕ್ರಮ ಮುಗಿದ ನಂತರ ಅಂದರೆ ಡಿಸೆಂಬರ್ ನಂತರ ನಿಧಾನಗತಿಯ ಮಕ್ಕಳು ಯಾವುದೇ ಕಾರಣಕ್ಕೂ ಅನುತ್ತೀರ್ಣವಾಗಬಾರದೆಂಬ ಕಾರಣದಿಂದ ಶೇ.50 ರಿಂದ ಶೇ.60ರಷ್ಟು ಅತಿ ಸರಳವಾದ ಅಧ್ಯಾಯಗಳಿಂದ ಟಾರ್ಗೆಟ್ – 40 ಎಂಬ ಪ್ರಶ್ನೆ ಕೋಠಿ ರಚಿಸಿ ನಿಧಾನಗತಿಯ ಮಕ್ಕಳ ಕಲಿಕೆಯ ಮಕ್ಕಳಿಗೆ ಒದಗಿಸಿ ಅವರ ಕಲಿಕೆಯನ್ನು ಉತ್ತಮಗೊಳಿಸಿ ಅವರು ಸರಳ ವಿಧಾನದಿಂದ ಉತ್ತೀರ್ಣರಾಗಲು ನೆರವಾಗುವುದು. |
| 20 | ಸಂಭವನೀಯ ಪ್ರಶ್ನೆಗಳ ಅಭ್ಯಾಸ | ವಿಷಯವಾರು ಶಿಕ್ಷಕರಿಂದ | ನವಂಬರ್ ನಂತರ | ಇಲಾಖಾ ನೀಲ ನಕಾಶೆಯ ಪ್ರಕಾರ ವಾರ್ಷಿಕ ಪರೀಕ್ಷೆಯಲ್ಲಿ ಬರುವ ಸಂಭವನೀಯ ಎರಡು ಮತ್ತು ಮೂರು ಅಂಕದ ಪ್ರಶ್ನೆಗಳನ್ನು ಕೊಟ್ಟು ಅಭ್ಯಾಸ ಮಾಡುವಂತೆ ತಿಳಿಸುವುದು. |
| 21 | ಇಲಾಖೆ ಒದಗಿಸುವ ಹಿಂದಿನ ವರ್ಷಗಳ ಅಭ್ಯಾಸ ಪ್ರಶ್ನೆಪತ್ರಿಕೆಗಳನ್ನು ಬರೆಸುವುದು | ವಿಷಯವಾರು ಶಿಕ್ಷಕರಿಂದ | ನವಂಬರ್ ನಂತರ | ಇಲಾಖೆಯಿಂದ ಒದಗಿಸಲಾಗುವ ಅಭ್ಯಾಸ ಪತ್ರಿಕೆಗಳನ್ನು ಬರೆಸಿ ಪುನರಾವರ್ತಿಸುವುದು, ಇದರಿಂದ ಮಕ್ಕಳಲ್ಲಿ ಪರೀಕ್ಷೆಯ ಬಗ್ಗೆ ಇರುವ ಭಯ, ಗೊಂದಲ ನಿವಾರಣೆಯಾಗಿ ಅವರಲ್ಲಿ ಆತ್ಮ ವಿಶ್ವಾಸ ಉಂಟಾಗುವುದರ ಜೊತೆ ಮುಂದೆ ಬರುವ ಪರೀಕ್ಷೆಯನ್ನು ಧೈರ್ಯದಿಂದ ಎದುರಿಸಿ ಯಶಸ್ಸನ್ನು ಪಡೆಯುವರು. |
| 22 | ಸರಣಿ ಪರೀಕ್ಷೆಗಳು | ಮುಖ್ಯಶಿಕ್ಷಕರು/ ಸಹ ಶಿಕ್ಷಕರು | ಜನವರಿಯಿಂದ | ವಿದ್ಯಾರ್ಥಿಗಳಿಗೆ ಪರೀಕ್ಷೆ ಭಯವನ್ನು ಹೋಗಲಾಡಿಸುವ ಉದ್ದೇಶದಿಂದ ಮತ್ತು ಓದಿದ ಅಂಶಗಳನ್ನು ಮನದಟ್ಟು ಮಾಡಿಸುವ ಉದ್ದೇಶದಿಂದ ಜನವರಿ ತಿಂಗಳಿನಿಂದ ಸರಣಿ ಪರೀಕ್ಷೆಗಳನ್ನು ನಡೆಸುವುದು. |

| | | | | |
|---|---|---|---|---|
| ಕ್ರ ಸಂ | ಚಟುವಟಿಕೆಯ ಹೆಸರು | ಅನುಷ್ಠಾನ ಗೊಳಿಸುವವರು | ನಿಗದಿಪಡಿಸಿದ ಸಮಯ | ಚಟುವಟಿಕೆಯ ವಿವರ |
| 23 | ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆ | ವಿಷಯವಾರು ಶಿಕ್ಷಕರಿಂದ | ಜೂನ್ ನಿಂದ | ವಿದ್ಯಾರ್ಥಿಗಳ ವ್ಯಾಟ್ಸಾಪ್ ಗ್ರೂಪ್ ರಚಿಸಿ ಅದರಲ್ಲಿ ಪಾಠಗಳಿಗೆ ಸಂಬಂಧಿಸಿದ ವೀಡಿಯೋ, ಪ್ರಶ್ನೋತ್ತರಗಳು, ಚಟುವಟಿಕೆಗಳು ಮತ್ತು ಶೈಕ್ಷಣಿಕ ವಿಷಯಗಳ ಚರ್ಚೆ ನಡೆಸುವುದು. ಶಾಲೆಯ ಸ್ಮಾರ್ಟ್ ಕ್ಲಾಸ್ ಮತ್ತು ಕಂಪ್ಯೂಟರ್ ಲ್ಯಾಬ್‌ಗಳ ಮೂಲಕ ಕಠಿಣ ವಿಷಯಗಳನ್ನು ಪರಿಣಾಮಕಾರಿಯಾಗಿ ಬೋಧಿಸುವುದು. |
| 24 | ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪ್ರತ್ಯೇಕ ಮತ್ತು ಪರಿಣಾಮಕಾರಿ ಬೋಧನಾ ವ್ಯವಸ್ಥೆ: | ಮುಖ್ಯಶಿಕ್ಷಕರು/ ಸಹ ಶಿಕ್ಷಕರು | ಜನವರಿ | ಡಿಸೆಂಬರ್ ನಂತರ ನಿಧಾನಗತಿ ಕಲಿಕೆಯ ಮಕ್ಕಳಿಗೆ ಹೆಚ್ಚಿನ ನಿಗಾವಹಿಸಲು ಮತ್ತು ಪರಿಣಾಮಕಾರಿಯಾಗಿ ಬೋಧಿಸಲು ಪ್ರತ್ಯೇಕ ತರಗತಿ ಕೋಣೆಯನ್ನು ಸ್ಥಾಪಿಸುವುದು. ಅವರಿಗೆ ಪ್ರತ್ಯೇಕ ವೇಳಾಪಟ್ಟಿ ತಯಾರಿಸಲು ಪ್ರತಿದಿನ ಅತಿಮುಖ್ಯವಾದ ಪ್ರಶ್ನೆಗಳನ್ನು ಸುಲಭ ವಿಧಾನದ ಮೂಲಕ ಓದಿಸುವುದು. |
| 25 | ಫಲಿತಾಂಶಮುಖಿ ಗ್ರಂಥಾಲಯ | ಮುಖ್ಯಶಿಕ್ಷಕರು/ ಸಹ ಶಿಕ್ಷಕರು | ನಿರಂತರ | ಶಾಲೆಯ ಗ್ರಂಥಾಲಯದಲ್ಲಿ ಎಸ್.ಎಸ್.ಎಲ್.ಸಿ. ಮಕ್ಕಳಿಗೆ ಓದಲು ವ್ಯವಸ್ಥೆ ಮಾಡುವುದು. ಎಲ್ಲಾ ವಿಷಯಗಳ ಹಿಂದಿನ ಪ್ರಶ್ನೆಪತ್ರಿಕೆಗಳು, ಸ್ಕೋರಿಂಗ್ ಪ್ಯಾಕೇಜ್, ಪಾಸಿಂಗ್ ಪ್ಯಾಕೇಜ್ ಮತ್ತು ಇನ್ನಿತರ ಪರೀಕ್ಷಾ ಸಂಪನ್ಮೂಲಗಳನ್ನು ಒದಗಿಸುವುದು. |
| 26 | ಮಕ್ಕಳ ನಿರಂತರ ಸಂಪರ್ಕ | ಮುಖ್ಯಶಿಕ್ಷಕರು/ ಸಹ ಶಿಕ್ಷಕರು | ನಿರಂತರ | ಶಿಕ್ಷಕರು ಮಕ್ಕಳೊಂದಿಗೆ ನಿರಂತರ ಸಂಪರ್ಕ ಹೊಂದಿರುವುದು. ದೂರವಾಣಿ ಕರೆಮಾಡುವುದರ ಮೂಲಕ, ವ್ಯಾಟ್ಸಪ್ ಗ್ರೂಪ್ ಮೂಲಕ ಮತ್ತು ಮಕ್ಕಳ ಮನೆಗಳಿಗೆ ಭೇಟಿ ನೀಡುವುದರ ಮೂಲಕ ಗೃಹಪಾಠ ಮತ್ತು ಚಟುವಟಿಕೆಗಳನ್ನು ನೀಡಲಾಗುತ್ತಿದೆ. ಮಕ್ಕಳಿಗೆ ಧೈರ್ಯ ತುಂಬುವುದು, ಆರೋಗ್ಯದ ಬಗ್ಗೆ ಕಾಳಜಿ ವಹಿಸುವಂತೆ ತಿಳಿಸುವುದು. ಮನೆಯಲ್ಲಿ ಕಲಿಕೆ ಬಗ್ಗೆ ಗಮನ ನೀಡುವಂತೆ ಮಾಡಲು ನಿರಂತರ ಸಂಪರ್ಕ ಹೊಂದಿರುವುದು. |

ವಿಷಯ ಶಿಕ್ಷಕರ ಸಹಿ — ಮುಖ್ಯ ಶಿಕ್ಷಕರ ಸಹಿ

[ ಬಿ ಎಸ್ ಸುರೇಶ್ ನಾಯ್ಕ್ ] — [ ಮಂಜುನಾಥ ರೆಡ್ಡಿ